ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ಹೊಂಬೇಗೌಡ ನಗರ ವಾರ್ಡ್–145 ರಲ್ಲಿ ವಾರ್ಡ್ ಸಮಿತಿ ಸಭೆಯನ್ನು ಶ್ರೀಮತಿ.ಲಕ್ಷ್ಮೀದೇವಿ ಉಪ ಆಯುಕ್ತರು ಕಂದಾಯ(ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:–02.01.2021 ರಂದು ಶನಿವಾರ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಉಳಿಕುಚ್ಚಮ್ಮ ಹಾಸ್ಟೆಲ್, 8ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್‌ನಲ್ಲಿ ಕರೆಯಲಾಗಿದ್ದು ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿ ಸದಸ್ಯರಿಗೆ ಹಾಗೂ ವಿಲ್ಸನ್ ಗಾರ್ಡನ್ ವೆಲ್‌ಫೇರ್ ಅಸೋಸಿಯೆಷನ್ ಸದಸ್ಯರಿಗೆ, ಸ್ಥಳೀಯ ನಿವಾಸಿಗರಿಗೆ ಮತ್ತು ವಾರ್ಡ್‌ನ ನಿವಾಸಿಗರಿಗೆ ಆಹ್ವಾನ ನೀಡಿದ್ದು ಸಭೆಗೆ ಹಾಜರಾಗಿರುವ ಸದಸ್ಯರಿಗೆ ಸ್ವಾಗತ ಕೋರುತ್ತಾ ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ.ಲಕ್ಷ್ಮೀದೇವಿ ರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

| ಹಾಜರಿದ್ದವರು | ಗೈರು ಹಾಜರಾತಿ |
|---|---|
| 1) ಉಪ ಆಯುಕ್ತರು (ದಕ್ಷಿಣ) ವಾರ್ಡ್–145 ನೋಡಲ್ ಅಧಿಕಾರಿ.<br>2) ವಾರ್ಡ್ 145 ಕ್ಕೆ ಸಂಬಂಧಪಟ್ಟಂತ AE, HI, SHI, Assessor, TI, BESCOM, BWSSB, Traffic & Police Department .<br>3) Garbage Contractor.<br>4) ವಿಲ್ಸನ್ ಗಾರ್ಡನ್ ವೆಲ್‌ಫೇರ್ ಅಸೋಸಿಯೆಷನ್.<br>5) ವಿನಾಯಕ ಬಳಗದ ಸಂಘದವರು. | 1) Horticulture & Forest. |

•• •• ••

1. ಪ್ರಥಮವಾಗಿ ನೋಡಲ್ ಅಧಿಕಾರಿರವರು ಈಗಾಗಲೇ 14 ಬ್ಲಾಕ್ ಸ್ಪಾಟ್ಸ್‌ಗಳನ್ನು ಕಸದಿಂದ ವಿಮುಕ್ತಗೊಳಿಸಿ ಸುಂದರಿಕರಣಗೊಳಿಸಲಾಯಿತ್ತು. ಈ ಒಂದು ಕಾರ್ಯ ಯಶಸ್ವಿಯಾಗಲು ಪೌರಕಾರ್ಮಿಕರ ಪಾತ್ರ ಬಹಳ ಮುಖ್ಯವಾಗಿದ್ದು ಇದರ ಎಲ್ಲಾ ಗೌರವ ಅವರಿಗೆ ಸಲ್ಲಬೇಕಾಗಿರುತ್ತದೆ ಎಂದು ಶ್ಲಾಘಿಸಿದರು.
2. ಈಗಾಗಲೇ ಹಲವು ಕಡೆಗಳಲ್ಲಿ **Pot Holes** ಗಳನ್ನು ಮುಚ್ಚಲಾಗಿದೆ, ಹಾಗೂ **BWSSB** ರವರು ತಮ್ಮ ಮುಂದಿನ ಕಾರ್ಯಯೋಜನೆಗಳನ್ನು ರೂಪಿಸಿಕೊಂಡಿರುವ ಬಗ್ಗೆ ಮಾಹಿತಿ ನೀಡುವುದು ಎಂದು ತಿಳಿಸಿದರು.
3. ವೆಲ್‌ಫೇರ್ ನಿವಾಸಿಯಾದ ಶ್ರೀ.ರಾಘವೇಂದ್ರ ರಾವ್ (9964199484) 6ನೇ ಕ್ರಾಸ್, ವಿಲ್ಸನ್ ಗಾರ್ಡನ್ ರವರು ತಮ್ಮ ಮನೆಯ ಮುಂಭಾಗದ ರಸ್ತೆಯಲ್ಲಿರುವ ಮರದ ರೆಂಬೆ/ಕೊಂಬೆಗಳು ಮನೆಯ ಕಾಂಪೌಂಡ್‌ಗೆ ತಾಕುತ್ತಿದ್ದು ಕಾಂಪೌಂಡ್ ಸೀಳು ಬಿಟ್ಟಿರುವುದು ತಳಪಾಯಕ್ಕೆ ಹಾನಿಯುಂಟಾಗಬಹುದು. ಆದ್ದರಿಂದ ಈ ಕೂಡಲೇ ಮರದ ರೆಂಬೆ/ಕೊಂಬೆಗಳನ್ನು ತೆರವುಗೊಳಿಸಲು ಕೋರಿಕೊಂಡಿರುತ್ತಾರೆ.
4. ವಿದ್ಯುತ್ ಕಂಬಗಳು ವಿಪರೀತ ಮಳೆಯಿಂದಾಗಿ ಕುಸಿದು ಬಿದ್ದು ಹೋಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ವಿದ್ಯುತ್ ಇಲಾಖೆಯವರನ್ನು ಗಮನ ಹರಿಸಲು ಕೋರಲಾಯಿತ್ತು.
5. 14ನೇ ಕ್ರಾಸ್ ಎಂದು ಹಲವು ರಸ್ತೆಗಳಿಗೆ ಹೆಸರು ನೀಡಿರುವುದರಿಂದ ವಿಳಾಸ ಹುಡುಕುವಲ್ಲಿ ಹಾಗೂ ಅಂಚೆದಾರರಿಗೂ ವಿಳಾಸ ಹುಡುಕಾಟಕ್ಕೆ ಕಷ್ಟವಾಗುತ್ತಿರುವುದು ಕಂಡು ಬಂದಿದ್ದು ರಸ್ತೆಗಳಿಗೆ ಕ್ರಾಸ್‌ನೊಂದಿಗೆ ಎ,ಬಿ,ಸಿ,ಡಿ...ಎಂದು ನೀಡುವುದರಿಂದ ವಿಳಾಸ ಪತ್ತೆಹಚ್ಚಲು ಸುಲಭ ಮಾರ್ಗವಾಗುತ್ತದೆ.

ಪು.ತಿ.ನೋ.

Scanned with CamScanner

6. ಶ್ರೀಮತಿ.ಮೀನಾ ರವರು 12ನೇ ಕ್ರಾಸ್‌ನಲ್ಲಿ ಪಾದಚಾರಿ ರಸ್ತೆ ಬಹಳ ಅಸ್ತವ್ಯಸ್ತಗೊಂಡಿದ್ದು ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಹಿರಿಯ ನಾಗರೀಕರಿಗೆ ಈಗಾಗಲೇ ನಡೆಯುವಾಗ ಕಾಲಿಗೆ **Fracture** ಗೊಂಡಿರುವುದನ್ನು ಸಭೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಸಿಬ್ಬಂದಿರವರು ಕೂಡಲೇ ಈ ಬಗ್ಗೆ ಗಮನ ಹರಿಸಿ ಅಗತ್ಯ ಕ್ರಮವಹಿಸುವುದು ಎಂದು ಸೂಚಿಸಲಾಯಿತು.
7. ಶ್ರೀಮತಿ.ನಾಗರತ್ನ(9945358035) ರವರು 11ನೇ ಕ್ರಾಸ್, ಬಿ.ಟಿ.ಎಸ್ ಮುಖ್ಯ ರಸ್ತೆಯ ಕಾರ್ನರ್‌ನಲ್ಲಿ ಪಾದಚಾರಿ ರಸ್ತೆಯಲ್ಲಿ ಫಿಶ್ ಫ್ರೈ ಮಾರಾಟದ ಗಾಡಿ ನಿಂತಿರುವುದು ಸಾರ್ವಜನಿಕರ ಓಡಾಟಕ್ಕೆ ಹಾಗೂ ಅದರಿಂದ ಬಹಳ ಕೆಟ್ಟ ವಾಸನೆ ಬರುತ್ತಿರುವುದರಿಂದ ಅಕ್ಕಪಕ್ಕದ ನಿವಾಸಿಗರಿಗೆ/ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವುದೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಆದ್ದರಿಂದ **Senior HI** ರವರು ಕೂಡಲೇ ಮೀನು ಮಾರಾಟದ ಗಾಡಿಯನ್ನು ತೆರವುಗೊಳಿಸಿ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.
8. ವಿಲ್ಸನ್ ಗಾರ್ಡನ್ 4 ಮತ್ತು 5ನೇ ಕ್ರಾಸ್ ನಡುವೆ ಬರುವ ಅಭಯಾಶ್ರಮದ **(Vice President)** ರವರಾದ ಶ್ರೀಮತಿ.ಸುಜಾತ (9886474867) ರವರು ಒಳಚರಂಡಿ ಸಮಸ್ಯೆಯ ಬಗ್ಗೆ ದೂರು ನೀಡಿರುತ್ತಾರೆ. ಹಾಗೂ ಮಲ್ಲಿಕಾರ್ಜುನರವರು(9341252729) ಸಹ ವಿಲ್ಸನ್ ಗಾರ್ಡನ್ ವ್ಯಾಪ್ತಿಯಲ್ಲಿ **BWSSB** ಗೆ ಸಂಬಂಧಿಸಿದಂತೆ ಹಲವು ತೊಂದರೆಗಳನ್ನು ಎದಿರಿಸುತ್ತಿರುವುದನ್ನು ತಿಳಿಸಿರುತ್ತಾರೆ. ಆದಕಾರಣ ಈ ಕೂಡಲೇ **BWSSB** ರವರಿಗೆ ಈ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತ್ತು.
9. ಮಾಧವ ಮೂರ್ತಿರವರು 13ನೇ ಕ್ರಾಸ್‌ನಲ್ಲಿ ಪಾದಚಾರಿಗಳಿಗೆ ಓಡಾಟಕ್ಕೆ ಸ್ಥಳಾವಕಾಶವಿಲ್ಲದಂತೆ ವಾಹನಗಳು ಇಕ್ಕೆಲಗಳಲ್ಲಿ ಅನಗತ್ಯವಾಗಿ ನಿಂತಿರುವುದರಿಂದ ಬಹಳ ಸಮಸ್ಯೆಯಾಗಿದ್ದು ಟ್ರಾಫಿಕ್ ಇಲಾಖೆರವರು ಸಾರ್ವಜನಿಕರಿಗೆ ಓಡಾಟಕ್ಕೆ ಅನುಕೂಲವಾಗುವಂತೆ ಕ್ರಮ ವಹಿಸಲು ಕೋರಿರುತ್ತಾರೆ.
10 ತಿಂಡಿ, ತಿನಿಸು ಪದಾರ್ಥಗಳ ಗಾಡಿ, ಹೂವಿನ ಗಾಡಿಗಳಿಂದ ಪಾದಚಾರಿ ರಸ್ತೆಯನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವುದರಿಂದ ರಸ್ತೆಗಳಲ್ಲಿ ವಯೋ ವೃದ್ಧರು **Walking** ಗೆ ಅಡಚಣೆಯಾಗುತ್ತಿರುವುದೆಂದು ದೂರಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಸಿಬ್ಬಂದಿರವರು ಪಾದಚಾರಿ ರಸ್ತೆಯ ಅಂಗಡಿ, ಗಾಡಿಗಳಿಂದ ತೆರವುಗೊಳಿಸುವಂತೆ ಕ್ರಮವಹಿಸಲು ಸೂಚಿಸಲಾಯಿತ್ತು.
11. 9ನೇ ಕ್ರಾಸ್ ರಸ್ತೆಗೆ ಕಸದ ಗಾಡಿ ಹಾಗೂ ಸ್ವೀಪರ್‌ಗಳು ಬರುತ್ತಿಲ್ಲವೆಂದು ತಿಳಿಸಿರುವುದರಿಂದ ಸಂಬಂಧಪಟ್ಟ ಸೂಪರ್‌ವೈಸರ್‌ರವರು ಈ ಕೂಡಲೇ ಆ ವ್ಯಾಪ್ತಿಯ ಪೌರಕಾರ್ಮಿಕರಿಗೆ ಘನತ್ಯಾಜ್ಯ ಸಂಗ್ರಹಣೆಗೆ ಸೂಕ್ತ ನಿರ್ದೇಶನ ನೀಡುವುದು.
12. ಪ್ರಕೃತಿ ಅಪಾರ್ಟ್‌ಮೆಂಟ್ 6ನೇ ಅಡ್ಡ ರಸ್ತೆಯಲ್ಲಿ ಹಸಿ ತ್ಯಾಜ್ಯವನ್ನು ವಿಂಗಡಿಸಿ ಕವರ್‌ನೊಂದಿಗೆ ನೀಡಿದರೆ ಪೌರಕಾರ್ಮಿಕರು ಸ್ವೀಕರಿಸಲು ತಿರಸ್ಕರಿಸುತ್ತಿದ್ದು, ಹಸಿ ತ್ಯಾಜ್ಯವನ್ನು ಕಸದ ಬುಟ್ಟಿಯಲ್ಲಿ ಶೇಕರಿಸಿ ನೀಡಿದರೆ ಮಾತ್ರ ಸ್ವೀಕರಿಸುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ **Senior HI** ರವರು ಪೌರಕಾರ್ಮಿಕರಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಿ ತ್ಯಾಜ್ಯವನ್ನು ಸ್ವೀಕರಿಸುವಂತೆ ತಿಳಿಸಲು ಸೂಚಿಸಲಾಯಿತ್ತು.
13. ಪಾದಚಾರಿ ರಸ್ತೆ ಬದಿಯಲ್ಲಿ ಬೆಳೆದಿರುವಂತ ಅನಗತ್ಯ ಕಾಂಗ್ರೆಸ್ ಗಿಡಗಳು ಬೆಳೆದಿರುವುದರಿಂದ ರಸ್ತೆ ಗುಡಿಸುವಾಗ ಅವುಗಳನ್ನು ಸಹ ಕಿತ್ತು ಸ್ವಚ್ಛಗೊಳಿಸುವಂತೆ ಸೂಚಿಸಲು ಸಭೆಗೆ ಹಾಜರಿದ್ದ ಸದಸ್ಯರು ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಗಮನ ಹರಿಸಲು **Senior HI** ರವರಿಗೆ ಸೂಚಿಸಲಾಯಿತು.

ಮು.ತಿ.ನೋ

Scanned with CamScanner

14. RFO ರವರು ತಿಂಗಳಿಗೊಮ್ಮೆ ಮಾಸಿಕ ಡ್ರೈವ್ ಮುಖಾಂತರ ತೆಂಗಿನ ಗರಿ, ಮರ ಗಿಡದ ತ್ಯಾಜ್ಯವನ್ನು ಸಂಗ್ರಹಣೆ ಮಾಡಲು ಸೂಚಿಸಲಾಯಿತು.
15. ಸುಧಾಮನಗರ ವ್ಯಾಪ್ತಿಯಲ್ಲಿ ಮುಖೇಶ್ (8792518053) ರವರು ಪೌರಕಾರ್ಮಿಕರ ತ್ಯಾಜ್ಯ ಸಂಗ್ರಹಣೆ ಗಾಡಿಗಳು ಬಹಳ ಹಳೆಯದಾಗಿದ್ದು, ಹಾಗೂ ಅವರಿಗೆ ಮೂಲ ಭೂತ ಸೌಕರ್ಯಗಳು (Gloves, Sanitizers, Uniform, Mask, Apron & Shoes) ಒದಗಿಸದಿರುವುದು ಹಾಗೂ ತುಂಬಾ ವಯಸ್ಸಾದವರು ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ, ಆದ್ದರಿಂದ ಈ ಬಗ್ಗೆ ಗಮನ ಹರಿಸಿ ಪೌರಕಾರ್ಮಿಕರಿಗೆ ಅನುಕೂಲವಾಗುವಂತೆ ಕ್ರಮವಹಿಸಲು ತಿಳಿಸಿರುತ್ತಾರೆ. ಇದರೊಂದಿಗೆ ಮುಖ್ಯ-ವೃತ್ತಗಳಲ್ಲಿ ಬೀದಿ ದೀಪಗಳು ಇಲ್ಲದಿರುವುದು ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಕೂಡಲೇ ಕ್ರಮವಹಿಸಲು ಸೂಚಿಸಲಾಯಿತು.
16. ಸಬ್ ಇನ್ಸ್‌ಪೆಕ್ಟರ್‌ರವರಾದ ಶ್ರೀ.ಸಾರ್ಥಕ್‌ರವರು ಟ್ರಾಫಿಕ್ ಇಲಾಖೆಯ ದೂರುಗಳಿಗೆ ಸಂಬಂಧಪಟ್ಟಂತೆ ಮಾತನಾಡುತ್ತಾ ರಸ್ತೆಗಳಲ್ಲಿ ಸುಗಮ ಸಂಚಾರ ನಮ್ಮ ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ. ಪ್ರತಿ ರೋಡ್‌ನಲ್ಲಿ Towing Vehicle ಮುಖಾಂತರ ಅನಗತ್ಯವಾಗಿ ಹಾಗೂ ಉದ್ದೇಶ ಪೂರ್ವಕವಾಗಿ No - Parking ಜಾಗದಲ್ಲಿ ವಾಹನಗಳನ್ನು ನಿಲ್ಲಿಸಿದ್ದರೆ ಅಂತಹ ವಾಹನಗಳನ್ನು ದಂಡ ವಿಧಿಸಿ ತೆರವುಗೊಳಿಸುವಲ್ಲಿ ಕ್ರಮ ಕೈಗೊಳ್ಳಲಾಗಿದೆ, ಹಾಗೂ One Way Board ಗಳನ್ನು ಹಲವೆಡೆ ಅಳವಡಿಸಿದ್ದರು ಸಾರ್ವಜನಿಕರು ಕಾನೂನು ನಿಯಮಗಳನ್ನು ಉಲ್ಲಂಘಿಸಿ ವಾಹನ ಸಂಚಾರ ನಡೆಸುತ್ತಿದ್ದು ಇದರಿಂದಾಗಿ ಸಂಚಾರಿಕರಿಗೆ ತೊಂದರೆಯಾಗುತ್ತಿರುವುದು ಕಂಡು ಬಂದಿದ್ದು, ಹಲವು ನಿಯಮದಡಿ ಎಚ್ಚರಿಕೆ ನೀಡಿ ದಂಡ ವಿಧಿಸಿ ಸಂಚಾರ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
17. ಉಪ ಆಯುಕ್ತರು (ದಕ್ಷಿಣ)ರವರು ಮಾತನಾಡುತ್ತಾ ಟಿ.ಟಿ.ಎಸ್. ರಸ್ತೆಯಲ್ಲಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಟ್ರಾಫಿಕ್ ಪೋಲಿಸ್‌ರವರಿಗೆ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.
18. ಎಲ್ಲಾ ಚರ್ಚೆಯ ನಂತರ ಸಭೆಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಸಭೆ ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿ ಹಾಗೂ | ಅಧ್ಯಕ್ಷರು ಹಾಗೂ |
| ಸಹಾಯಕ ಅಭಿಯಂತರರು | ನೋಡಲ್ ಅಧಿಕಾರಿ |
| ವಾರ್ಡ್ ಸಂಖ್ಯೆ – 145 | ವಾರ್ಡ್ ಸಂಖ್ಯೆ – 145 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

Scanned with CamScanner